ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಇಬ್ಬರು ಕೂಲಿಯವರನ್ನು ಕರೆದುಕೊಂಡು ಹೋದ ಪೋಲೀಸ್ ಅಧಿಕಾರಿ ಹೃದಯಾಘಾತದಿಂದ ಸತ್ತಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಇಬ್ಬರು ಕೂಲಿಯವರು ನಾಪತ್ತೆಯಾದಮೇಲೆ ಅವರ ಹೆಂಗಸರು ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ ನಂತರವೇ ಈ ಪೋಲೀಸ್ ಅಧಿಕಾರಿ ಹೃದಯಾಘಾತದಿಂದ ಸತ್ತಿದ್ದಾರೆ. ಆದ್ದರಿಂದ ಇದು ಒಂದಕ್ಕೊಂದಕ್ಕೆ ಸಂಬಂಧವಿರಬಹುದು ಅಥವಾ ಇಲ್ಲದಿರಬಹುದು. ಇವರಿಬ್ಬರನ್ನು ರೋಣ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗದಿದ್ದರೆ, ಇವರು ಎಲ್ಲಿದ್ದಾರೆಂಬುದನ್ನು ಪತ್ತೆ ಮಾಡುವಂತೆ ತಾವು ಆಜ್ಞೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಅವರ ಫೋಟೋಗಳನ್ನು ಕೊಟ್ಟರೆ ಅವರನ್ನು ಪತ್ತೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ನಾನು ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೂ ತಿಳಿಸಿದ್ದೇನೆ ಮತ್ತು ಸಿ.ಐ.ಡಿ. ಅವರಿಗೂ ತಿಳಿಸಿದ್ದೇನೆ. ಇಲ್ಲಿ ಕೊಟ್ಟರೂವ ಹೇಳಿಕೆ ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಮತ್ತೆ ತನಿಖೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(೧) ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಹೈದರಾಬಾದ್ ವೇತನ ಶ್ರೇಣಿ ಕೊಡುವ ಬಗ್ಗೆ.

ಶ್ರೀ ಬಿ. ರಾಜೂಗೌಡ (ಹನೂರು).—ಮಾನ್ಯ ಅಧ್ಯಕ್ಷರೇ, ೧-೧೧-೧೯೫೬ರಲ್ಲಿ ಕರ್ನಾಟಕಕ್ಕೆ ವಿಲೀನಗೊಂಡು ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಮಂಗಳೂರು, ಕೊಡಗಿಂ ಮತ್ತು ಅದರಲ್ಲೂ ಕೊಳ್ಳೇಗಾಲ ತಾಲ್ಲೂಕಿದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೊಟ್ಟು ಕೊಳ್ಳೇಗಾಲ ತಾಲ್ಲೂಕಿನ ಕೆಲವರನ್ನು ಈ ಸೌಲಭ್ಯದಿಂದ ಕೈಬಿಟ್ಟಿರುವುದು ವಿಷಾದನೀಯ ವಾಗಿದೆ. ಉದಾಹರಣೆಗೆ ಕೊಳ್ಳೇಗಾಲ ತಾಲ್ಲೂಕಿನ ತಾಳಬೆಟ್ಟದ ಆಶ್ರಯ ಶಾಲೆಯಲ್ಲಿ (ಪ್ರಾಥಮಿಕ ಶಾಲೆ) ಮುಖ್ಯ ಉಪಾಧ್ಯಾಯರಾಗಿ ೧-೨-೧೯೫೬ ರಿಂದಲೂ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀ ಮಾಧುರವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯಲ್ಲಿ ೩೦-೧-೧೯೬೬ರಲ್ಲಿ ಶ್ರೀಯುತರು ಹೈದರಾಬಾದು ವೇತನ ಶ್ರೇಣಿ ಸೌಲಭ್ಯಕ್ಕೆ ಅರ್ಹರಲ್ಲವೆಂದು ವಿಪರ್ಯಾಸದ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಇದು ಮಲತಾಯಿಯ ಧೋರಣೆಯಲ್ಲದೆ ಮತ್ತೇನು ? ಸಂಬಂಧಪಟ್ಟ ಅಧಿಕಾರಿಗಳು ಆದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಶ್ರೀ ಸಿ. ಮಾಧು ಅವರಿಗೆ ಹೈದರಾಬಾದು ವೇತನ ಶ್ರೇಣಿಯನ್ನು ಕೊಡಬಹುದೆಂದು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ನಿರ್ದೇತಕರಿಗೆ ಶಿಫಾರಸು ಮಾಡಬೇಕೆಂದು ಆದೇಶ ಕಳುಹಿಸಿ ಶ್ರೀಯುತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇವಲ ಒಬ್ಬರ ಬಗ್ಗೆ ಹೇಳುತ್ತಿದ್ದಾರೆ; ಆದರೆ ಕರ್ನಾಟಕ ರಾಜ್ಯದ ಎಲ್ಲಾ ಶಿಕ್ಷಕರ ಪರವಾಗಿ ಶಿಕ್ಷಕರ ಸಂಘದವರು ಹಲವಾರು ಸಲ ನಮ್ಮನ್ನು ಭೇಟಿ ಮಾಡಿ ಹೈದರಾಬಾದ್ ವೇತನ ಶ್ರೇಣಿ ಎಲ್ಲರಿಗೂ ಅನ್ವಯವಾಗ ಬೇಕೆಂದು ಕೇಳಿದ್ದಾರೆ. ಇಂತಹ ಹಲವಾರು ಸಮಸ್ಯೆಗಳು ಇವೆ. ಸರ್ಕಾರ ಇದರ ಬಗ್ಗೆ ಅದಷ್ಟೂ ಜಾಗ್ರತೆಯಾಗಿ ಒಂದು ತೀರ್ಮಾನ ಕೈಕೊಳ್ಳಬೇಕೆಂದು ಯೋಚನೆ ಮಾಡುತ್ತಿದೆ. ಸಾಧ್ಯವಾದಮಟ್ಟಿಗೂ ಇದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

(೨) ಹುಕ್ಕೇರಿ ತಾಲ್ಲೂಕಿನಲ್ಲಿ ಹಸಿರು ಮಂತ್ತು ಕೆಂಪು ಕಾರ್ಡ್‌ಗಳ ಧಾನ್ಯ ವಿತರಣೆಯಲ್ಲಿ ನಡೆದ ಅವ್ಯವಹಾರ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಬೋರಗಲ್ ಗ್ರಾಮದ ಗ್ರಾಮಸೇವಾ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಬರುವ ಹಳ್ಳಿಯ ಜನರಿಗೆ ಹಸಿರು ಹಾಗೂ ಕೆಂಪು ಕಾರ್ಡುಗಳ ಧಾನ್ಯ ವಿತರಣೆಯಲ್ಲಿ ಅವ್ಯವಹಾರ ನಡೆದಿದ್ದು ಈಗಾಗಲೇ ಗ್ರಾಮಸ್ಥರಿಂದ ತಾರೀಖು ೬-೧-೧೯೬೬ರಂದು ಹುಕ್ಕೇರಿ ತಾಲ್ಲೂಕಿನ ತಹಶೀಲ್ದಾರ್ ಅವರಿಗೆ ದೂರನ್ನು ನೀಡಿರುತ್ತಾರೆ.

ಆಪಾದಿತ ಸೆಕ್ರೆಟರಿಯವರ ಮೇಲೆ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಳ್ಳದೆ ಇರುವ ಬಗ್ಗೆ ವಿಷಾದಿಸುತ್ತಾ, ಸಂಬಂಧಪಟ್ಟ ಗ್ರಾಮಸೇವಾ ಸಹಕಾರಿ ಸಂಘದ ಎಲ್ಲಾ ತರಹದ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಯೋಗ್ಯ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಈಗಾಗಲೇ ಆಹಾರ ಸಚಿವರ ಹಾಗೂ ಸಹಕಾರ ಸಚಿವರಿಗೆ ಮನವಿಯನ್ನು ಕೊಟ್ಟಿದ್ದು ಈ ವಿಷಯದಲ್ಲಿ ಸರ್ಕಾರದ ಗಮನ ಸೆಳೆಯುತ್ತಾ ಸದನದಲ್ಲಿ ಸಂಪೂರ್ಣ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಹಸಿರು ಕಾರ್ಡ್ ವಿತರಣೆಯಲ್ಲಿ ಅನೇಕ ಅರ್ಹ ಕುಟುಂಬಗಳು ಬಿಟ್ಟು ಹೋಗಿ ಅನರ್ಹವಾದಂಥ ಕುಟುಂಬಗಳಿಗೆ ವಿತರಣೆ ಮಾಡಲಾಗಿದೆ ಎಂಬತಕ್ಕಂಥ ವಾದವಿವಾದ ಇದ್ದುದರಿಂದ ಈ ಒಂದು ವ್ಯಾಪ್ತಿಯಲ್ಲಿ ಎಲ್ಲಾ ಅರ್ಹ ಕುಟುಂಬಗಳನ್ನು ತಂದು ಅನರ್ಹವಾದಂಥ ಕುಟುಂಬಗಳನ್ನು ಪಟ್ಟಿಯಿಂದ ತೆಗೆದು ಹಾಕಬೇಕೆಂಬ ತೀರ್ಮಾನವನ್ನು ಸಚಿವಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ. ಸಚಿವಸಂಪುಟದ ಈ ತೀರ್ಮಾನದಿಂದ ಸುಮಾರು ೬ ಲಕ್ಷ ಕುಟುಂಬಗಳಿಗೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಈ ತಿಂಗಳಲ್ಲಿಯೇ ಮುಗಿಸಬೇಕೆಂದು ಹೇಳಿದ್ದೇವೆ. ಈ ಹಸಿರು ಕಾರ್ಡು ಕೊಡುವುದರಲ್ಲಿ ಅವ್ಯವಹಾರ ನಡೆದಿದೆ ಮತ್ತು ಹಸ್ತಕ್ಷೇಪ ನಡೆದಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ನಾನು ತಕ್ಷಣವೇ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(೩) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಸೊಳ್ಳೆಗಳ ಕಾಟ

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ತಾಲ್ಲೂಕಿನ ಉಳ್ಳಾಲ ನಗರವು ಸುಮಾರು ೩೨ ಸಾವಿರ ಜನರು ವಾಸ ಮಾಡಿರುವ ಸ್ಥಳ ಕಡಲಿನ ಬದಿಯಲ್ಲಿ ಪ್ರಕೃತಿ ಸೌಂದರ್ಯ ಇರುವ ಪ್ರದೇಶ. ಕೆಲವು ವರ್ಷಗಳ ಹಿಂದೆ ಉಳ್ಳಾಲದ ಆರೋಗ್ಯ ಚೆನ್ನಾಗಿತ್ತು. ಆದೇಕರು ಈ ಕಾರಣದಿಂದ ಇಲ್ಲಿಗೆ ಬಂದು ನೆಲಸಿದರು. ಈಗ ನಾಲ್ಕೈದು ವರ್ಷಗಳಿಂದ ಇಡೀ ಉಳ್ಳಾಲ ಸೊಳ್ಳೆಗಳ ಹಾವಳಿಗೆ ತುತ್ತಾಗಿದೆ, ಈ ವರ್ಷವಂತೂ ಭಾರಿ ಬೇಸಿಗೆ ಕಾರಣ ಇಲ್ಲಿ ಅನೇಕ ಖಾಸಗಿ ಬಸ್ ಫ್ಯಾಕ್ಟರಿಗಳೂ, ಒಂದು ಸರ್ಕಾರಿ ಬಸ್ ಫ್ಯಾಕ್ಟರಿಯೂ ಇದ್ದು ಇಲ್ಲಿ ಮಿಾನಿನ ದುರ್ನಾತದ ಕೊಳಕು ನೀರು ಭೂಮಿಯಾಡಿಯಿಂದ ಹರಿದು ಹೋಗಲು ನೆಲ್ಲಿ ಜೋಡಿಸಿ ಸಮುದ್ರಕ್ಕೆ ಬಿಡುವ ವ್ಯವಸ್ಥೆ ಸರಿಯಾಗಿಲ್ಲ. ಆದಕಾರಣ ಕೆಲವು ವರ್ಷಗಳಿಂದ ಸೊಳ್ಳೆಗಳ ಕಾಟದಿಂದ ರಾತ್ರಿಗಳನ್ನು ಕಳೆಯುವುದಕ್ಕೆ ಕಷ್ಟವಾಗಿದೆ. ಈ ಬಗ್ಗೆ ಆರೋಗ್ಯ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಆದಕಾರಣ ಉಳ್ಳಾಲದ ಈ ಸೊಳ್ಳೆ ನಿವಾರಣೆ ಅತೀ ಅಗತ್ಯವಾಗಿರುತ್ತದೆ. ಈ ಕಾರಿತು ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಆಯಾ ನಗರಗಳ ನಿರ್ವಹಣೆಯನ್ನು ಕಾಪಾಡುವಂತಹ ಜವಾಬ್ದಾರಿ ಅಲ್ಲಿನ ಮುನಿಸಿಪಾಲಿಟಿಗಳ ಮೇಲೆ ಮತ್ತು ಅಲ್ಲಿನ ಸ್ಥಳೀಯ ಸಂಸ್ಥೆಗಳ ಮೇಲಿದೆ. ಆರೋಗ್ಯ ಸಮಸ್ಯೆಗಳಾದ ಮಲೇರಿಯ, ಅನೇಕಾಲು ರೋಗ, ಮತ್ತು ಬೇರೆ ಸೊಳ್ಳೆಗಳ ಮುಖಾಂತರ ಹಬ್ಬುವಂತೆ ಸಾಧ್ಯತೆ ಕಂಡುಬಂದಲ್ಲಿ ನಗರಸಭೆಯ ವ್ಯಾಪ್ತಿಗೆ ಬರುವಂಥ ಪಟ್ಟಣಗಳಲ್ಲಿ ನಿಯಂತ್ರಣ ಘಟಕಗಳನ್ನು ಮಂಜೂರಾತಿ ಮಾಡಿಕೊಡುವ ವಿಚಾರ ಮಾಡಬಹುದು. ನೈರ್ಮಲೀಕರಣ ಸಂಬಂಧವಾದ ವಿಚಾರದಲ್ಲಿ ಸ್ಥಳೀಯ ಸಂಸ್ಥೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅವಶ್ಯವಿರುತ್ತದೆ. ಹಾಗೂ ನಗರಾಡಳಿತ ಇಲಾಖೆ ಮುಖಾಂತರವಾಗಿ ಹೆಚ್ಚಿನ ನಿರ್ದೇಶನ ಪಡೆದು ಕಾರ್ಯಕ್ರಮ ನಡೆಸಬಹುದು. ಹಾಗೂ ಈವರೆಗೆ ಸರ್ಕಾರದ ಗಮನಕ್ಕೆ ಯಾವುದೇ ವರದಿಗಳು ಈ ಬಗ್ಗೆ ಬಂದಿಲ್ಲ. ಈ ಕಾರಣದಿಂದ ಮಾನ್ಯ ಸದಸ್ಯರು ಹೆಚ್ಚಿನ ವಿವರಗಳನ್ನು ಕೊಟ್ಟರೆ ನಾನು ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಜಿಲ್ಲಾ ವೈದ್ಯಾಧಿಕಾರಿ ಅವರಿಗೆ ಕಳುಹಿಸಿಕೊಡುತ್ತೇನೆ.